BENGALURU, FRIDAY, FEBRUARY 3, 2017 WWW.BANGALOREMIRROR.COM 18 Pages Price ₹2.50

# Bangalore Mirror

TEMPERATURE MAX 32 | MIN 16 | HUMIDITY 37% FORECAST MAINLY CLEAR SKY. FOG/MIST VERY LIKELY IN SOME AREAS DURING MORNING HOURS | SUNRISE 06:45 HRS | SUNSET 18:21 HRS

**Forty per cent of the 812 trees that might be chopped for the steel flyover can be saved, says Institute of Wood Science and Technology; it has offered to translocate the big trees but civic bodies have not responded yet**

# INSTITUTE SAYS IT CAN STOP THE GREENOCIDE




**GREEN WITH ENVY:** The state government is hell-bent on axing these magnificent beauties to make way for the steel flyover from Basaveshwara Circle-Hebbal Flyover

Nirad.Mudur
@timesgroup.com
TWEETS @niradMIRROR

A city-based centre of excellence in wood science research is ready to save as many tress as possible from the 812 marked to be axed for two infrastructure projects – the controversial steel flyover from Basaveshwara Circle to Hebbal Flyover and the Jayamahal Road widening.

The Institute of Wood Science & Technology (IWST) – under the Indian Council of Forestry Research & Education (ICFRE) – has expressed willingness to conduct the study in collaboration with Volvo, which has specialised trucks to translocate trees without damaging them.

Interestingly, while neither the Bangalore Development Authority (BDA) nor the Bruhat Bengaluru Mahanagara Palike (BBMP) has sought any consultations with the IWST so far, the Central Mine Planning and Design Institute (CMPDI) in Singrauli district of Madhya Pradesh has signed a memorandum of understanding (MoU) with IWST for a similar study, IWST director Surendra Kumar told Bangalore Mirror on the side-lines of a national conference on "Tree improvement research in India: Current trends and future prospects".




BM's front page report on Jan 27

The CMPDI in Singrauli is looking at clearing a cluster of trees to make way for a coal mine in this MP district that borders Uttar Pradesh, for which it is preferring translocation over uprooting them. "We will be preparing a systematic protocol of translocating trees before actually doing it. The protocol is very important," he said, adding that it ensures minimal damage to the tree being shifted.

"At least 40 per cent of these (812) trees (in Bengaluru) can be translocated safely to roadside locations elsewhere," he said. "If we are asked to carry out a feasibility study, we can easily do so as we have the required capability."

The IWST plans to use tomography, which involves placing sensors on the trees to assess the overall strength, stability and health of the trees. Tomography uses the sensors to display a representation of a cross-section of the

TURN TO PAGE 2»

# Wood institute can stop the Greenocide

» CONTINUED FROM PAGE 1

tree using X-rays or ultrasound.

The feasibility study also assesses the tree's girth, its age and the method of translocating them to the destination points.

"This also includes pre- and post-translocation treatment for better survival to ensure prevention of pest attacks at the new location and the ideal sunlight exposure, which should be the same as the tree had in its original location," he said.

The steel flyover project is under the BDA while the Jayamahal Road widening project is under the BBMP. But for both the projects the decision over the trees falls under the jurisdiction of the BBMP within city limits.

When contacted, deputy conservator of forests, BBMP, Appu Rao, was not quite aware of the functions of the IWST although the latter dealt with the scientific aspects of trees.

However, when informed, he did show an interest in contacting the institute to find out more details about how at least some trees could be translocated, and save from the axe.

## IWST PROPOSAL GETS NO BBMP RESPONSE

The IWST had also sent a proposal to the BBMP to conduct ward-specific tree health monitoring programme, especially for the roadside trees which get uprooted in the event of thunderstorms, posing a grave threat to life and property. However, there has been no response from the BBMP since the proposal was sent to the civic agency a few months ago.

IWST director Kumar said, "We had sent a proposal to the BBMP for assessing health of avenue trees (the ones lining the roads on either side) in each city ward and maintain a record of each tree's health and fitness. This is important as these are the trees which cause maximum damage to people during thunderstorms."

He said the idea is for the IWST to carry out the inspection with the BBMP as the co-principal investigators. The IWST had plans to use tomography in this too. "Using this system, we can assess the hollowness of the tree trunk, whether the tree is affected by pests, the root system and its spread, as well as the overall strength and stability of the tree," he said.

BBMP's DCF Appu Rao, however, denied having received any such correspondence from the IWST.

BENGALURU
FRIDAY, FEBRUARY 3, 2017
THE HINDU
INDIA'S NATIONAL NEWSPAPER SINCE 1878

# 'City's roads should be lined with sturdier trees'

RANJANI GOVIND

**BENGALURU:** More often than not, it is not the number of trees that determine how effective a city's green cover is, but the choice of tree saplings and areas chosen for planting them that add value to the ecosystem. This was the point made clear by tree scientists, geneticists and experts here on Thursday on the sidelines of the first day of the two-day national conference on 'Tree improvement research in India: Current trends and future prospects' hosted by the Institute of Wood Science and Technology (IWST).

"Bengaluru has an overdose of gulmohar and jacaranda trees. They are beautiful flowering trees, but it's not a good idea to have them lining important avenues as these softwood varieties do not endure the harsh weather," said Surendra Kumar, director, IWST. "Their 'fall-out' rate is large, be it because of wind, rain or even road-widening ... they fall apart," he said.

It is not just the softness of the wood that makes the trees buckle under pressure, but their roots get damaged during road-widening, making them weaker. "If the government authorities are informed of this, they can replace the trees with other varieties that are stronger, to make soil health more meaningful," Mr. Kumar said.

There are plenty of trees to choose from. "Pongamia (*Honge*) is a hardy alternative. These trees take only five years to reach a height of 10 metres. They can make up a canopy or be a stately addition to an avenue," said K.S. Sugara, Principal Chief Conservator of Forests, Karnataka Department of Forests.

According to Mr. Sugara, Bengaluru could bring in varieties such as neem, bamboo, Burma bamboo, sandalwood and red sanders as avenue trees and also on vacant land, as these tree varieties help improve soil quality.

03.02.2017
ಶುಕ್ರವಾರ
ಸಂಪುಟ: 2
ಸಂಚಿಕೆ: 30
ಪುಟಗಳು: 12+4
₹ 5

/VishwavaniNews epaper.vishwavani.news/ vishwavani.news
ಬೆಂಗಳೂರು • ಮಂಗಳೂರು • ಕಲಬುರಗಿ • ಬೆಳಗಾವಿ • ಹುಬ್ಬಳ್ಳಿ • ದಾವಣಗೆರೆ

ವಿಶ್ವವಾಣಿ
ವಿಶ್ವಾಸವೇ ವಿಶ್ವ

### ವಿಚಾರ ಸಂಕಿರಣದಲ್ಲಿ ಪರಿಸರ ತಜ್ಞ ಡಾ.ಎಚ್.ವೈ.ಮೋಹನ್ ರಾಮ್ ಅಭಿಮತ

# ವೃಕ್ಷ ಸಂರಕ್ಷಣೆಗೆ ಕಾಳಜಿ ಅಗತ್ಯ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ನೈಸರ್ಗಿಕ ಸಂಪನ್ಮೂಲಗಳನ್ನು ಹೆಚ್ಚು ಬಳಸುವುದರಿಂದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಇದು ಹೀಗೆಯೇ ಮುಂದುವರಿದರೆ ಮನುಕುಲವೇ ನಾಶವಾಗಲಿದೆ ಎಂದು ಹಿರಿಯ ಪರಿಸರ ತಜ್ಞ ಡಾ. ಎಚ್.ವೈ.ಮೋಹನ್ ರಾಮ್ ಎಚ್ಚರಿಸಿದರು.

ಮಲ್ಲೇಶ್ವರದ ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ ಗುರುವಾರ ಆಯೋಜಿಸಿದ್ದ 'ಭಾರತದಲ್ಲಿ ವೃಕ್ಷ ಸುಧಾರಣೆ ಸಂಶೋಧನೆಯಲ್ಲಿ ಇತ್ತೀಚಿನ ಒಲವುಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ನಮ್ಮ ಸುತ್ತಮುತ್ತಲಿನ ಪರಿಸರದಿಂದ ನಾವು ಉತ್ತಮ ಆಮ್ಲಜನಕ ಸೇವಿಸುತ್ತಿದ್ದೇವೆ. ಆದರೆ ನಿಸರ್ಗವನ್ನು ಶೋಷಿಸುತ್ತಿರುವ ನಾವು, ಅದರ ಪೋಷಣೆ ಕಡೆಗೆ ಕಿಂಚಿತ್ತೂ ಗಮನ ಕೊಡುತ್ತಿಲ್ಲ. ನಿಸರ್ಗದ ಧಾರಾಳತೆಗೂ ಒಂದು ಮಿತಿ ಇದೆ ಎಂದರು.

ಪರಿಸರ ಸಂರಕ್ಷಣೆಗೆಂದೇ ನಮ್ಮಲ್ಲಿ ಹತ್ತಾರು ಬಗೆಯ ಸಂಸ್ಥೆಗಳಿವೆ. ಆದರೆ, ಇವೆಲ್ಲವೂ ಕೇವಲ ವಿದ್ಯಾರ್ಥಿಗಳನ್ನು ಉತ್ಪಾದಿಸುತ್ತಿವೆಯೇ ಹೊರತು ಉಪಯುಕ್ತವಾದ ಸಂಶೋಧನೆಗಳ ಕಡೆಗೆ ಗಮನ ಹರಿಸುತ್ತಿಲ್ಲ. ಇದರ ಜತೆಗೆ, ಸರಕಾರವೂ ಸಂಶೋಧನೆಗಳನ್ನು ಆದ್ಯತೆಯ ಮೇರೆಗೆ ಜಾರಿಗೆ ತರುವ ಕೆಲಸ ಮಾಡಬೇಕಿದೆ ಎಂದು ಸಲಹೆ ನೀಡಿದರು.

> ಮರಗಳನ್ನು ಬೆಳೆಸುವುದು ಈಗ ಲಾಭದಾಯಕ ಕಸುಬಾಗಿದೆ. ಸಮಾಜದ ನಿರೀಕ್ಷೆಗೆ ತಕ್ಕಂತೆ ನಾವು ಸ್ಪಂದಿಸುತ್ತಿಲ್ಲ. ಕೇವಲ ಸಸಿ ನೆಟ್ಟರಷ್ಟೇ ಸಾಲದು. ಅವುಗಳ ಆರೋಗ್ಯದ ಬಗ್ಗೆಯೂ ಗಮನ ನೀಡಬೇಕು.
>
> **-ಸುರೇಂದ್ರಕುಮಾರ್**
> ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ ನಿರ್ದೇಶಕ



ಮಲ್ಲೇಶ್ವರದ ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ ಆಯೋಜಿಸಿದ್ದ 'ಭಾರತದಲ್ಲಿ ವೃಕ್ಷ ಸುಧಾರಣೆ ಸಂಶೋಧನೆಯಲ್ಲಿ ಇತ್ತೀಚಿನ ಒಲವುಗಳು' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳಾದ ಆರ್.ಎಸ್.ಪ್ರಶಾಂತ್, ಆರ್.ಎಸ್.ಸುರೇಶ್, ಪರಿಸರ ತಜ್ಞ ಡಾ.ಎಚ್.ವೈ.ಮೋಹನ್ ರಾಮ್, ಅರಣ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ಸುಗಾರ ಇದ್ದರು.

## ಒತ್ತುವರಿ ಸಮಸ್ಯೆಯಿಂದ ಕಂಗೆಟ್ಟ ಅರಣ್ಯ ಇಲಾಖೆ

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ. ಎಸ್.ಸುಬ್ಬರಾವ್ ಮಾತನಾಡಿ, ದೇಶದಲ್ಲಿ ಪ್ರತೀ ಹೆಕ್ಟೇರ್‌ಗೆ ಕೇವಲ 73 ಮರಗಳಷ್ಟೇ ಇವೆ. ಜಾಗತಿಕ ಸರಾಸರಿ ಮಟ್ಟಕ್ಕೆ ಹೋಲಿಸಿದರೆ, ಭಾರತದಲ್ಲಿರುವ ಅರಣ್ಯದ ಪ್ರಮಾಣ ಕಡಿಮೆ ಎನ್ನುವುದು ತಿಳಿದು ಬಂದಿದೆ ಎಂದು ಹೇಳಿದರು.

ದೇಶದಲ್ಲಿ 15 ಲಕ್ಷ ಹೆಕ್ಟೇರ್ ಅರಣ್ಯವಿದ್ದರೂ, ಇಲ್ಲಿಯ ಕೈಗಾರಿಕಾ ಅಗತ್ಯಗಳಿಗೆ ನಾವು ಆಮದನ್ನೇ ನೆಚ್ಚಿಕೊಂಡಿದ್ದೇವೆ. ಈಗ ಇರುವ ಶೇ.12ರಷ್ಟು ಆಮದು 2020ರ ಹೊತ್ತಿಗೆ ದುಪ್ಪಟ್ಟಾಗುವ ಸಂಭವವಿದೆ. ಈ ವಿಷಯದಲ್ಲಿ ಸ್ವಾವಲಂಬನೆಯನ್ನು ಗುರಿಯಾಗಿಸಿಕೊಂಡು ಸಂಶೋಧನೆಗಳು ನಡೆಯ ಬೇಕು. ಅರಣ್ಯ ಇಲಾಖೆಗೆ ಒತ್ತುವರಿಯದ್ದೇ ದೊಡ್ಡ ಸಮಸ್ಯೆಯಾಗಿದ್ದು, ಈ ಸಂಬಂಧ ನಿಗಮಗಳು ಸಂಕಷ್ಟದಲ್ಲಿವೆ. ಕೃಷಿಗೆ ಬೇಕಾದ ಮೂಲ ಸಾಮಗ್ರಿಗಳನ್ನು ಪೂರೈಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಇತ್ತೀಚೆಗೆ ತೇಗದ ಮರದ ಥಿನ್ನಿಂಗ್ ಬಗ್ಗೆ ತಪ್ಪು ಕಲ್ಪನೆಯಿಂದ ಕೂಡಿರುವ ಅಪಪ್ರಚಾರ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶುಕ್ರವಾರ,3 ಫೆಬ್ರವರಿ 2017 | ಪುಟಗಳು: 16+4+6 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 120

VK

ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಮಂಗಳೂರು | ಹುಬ್ಬಳ್ಳಿ | ಶಿವಮೊಗ್ಗ | ಬಾಗಲಕೋಟ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA



ಬಿಜೆಪಿಯ ತಾರಾ ಪ್ರಚಾರಕರ ಪಟ್ಟಿಯಲ್ಲಿ ಕೊನೆಗೂ ವರುಣ್ ಗಾಂಧಿಗೆ ಸ್ಥಾನ P12



ಏರ್‌ಸೆಲ್-ಮ್ಯಾಕ್ಸಿಸ್ ಹಗರಣ: ಮಾರನ್ ಬ್ರದರ್ಸ್‌ಗೆ ರಿಲೀಫ್ P12

ನಟಿ ಶ್ರೀದೇವಿಗೀಗ ಸಿನಿಮಾ ಬದುಕಿಗಿಂತ ಮಕ್ಕಳ ಬದುಕೇ ಪ್ರಮುಖ ಆದ್ಯತೆಯಂತೆ



### ಪರಿಸರ ತಜ್ಞ ಡಾ.ಎಚ್ ವೈ ಮೋಹನ್‌ರಾಮ್ ಎಚ್ಚರಿಕೆ

# ಪರಿಸರ ನಾಶದಿಂದ ಮನುಕುಲ ಉಳಿಯದು

**ವಿಕ ಸುದ್ದಿಲೋಕ** ಬೆಂಗಳೂರು

ನೈಸರ್ಗಿಕ ಸಂಪನ್ಮೂಲಗಳನ್ನು ಮಿತಿಮೀರಿ ಬಳಸುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಇದು ಹೀಗೆಯೇ ಮುಂದುವರಿದರೆ ಮನುಕುಲವೇ ನಾಶವಾಗಲಿದೆ ಎಂದು ಹಿರಿಯ ಪರಿಸರ ತಜ್ಞ ಡಾ. ಎಚ್ ವೈ ಮೋಹನ್‌ರಾಮ್ ಎಚ್ಚರಿಸಿದ್ದಾರೆ.

ನಗರದ ವೃಕ್ಷವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಏರ್ಪಡಿಸಲಾಗಿರುವ ಎರಡು ದಿನಗಳ 'ಭಾರತದಲ್ಲಿ ವೃಕ್ಷ ಸುಧಾರಣೆ ಸಂಶೋಧನೆಯಲ್ಲಿ ಇತ್ತೀಚಿನ ಒಲವುಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಗುರುವಾರ ಮಾತನಾಡಿದರು.

''ನಾವು ನಮ್ಮ ಸುತ್ತಲಿನ ನಿಸರ್ಗದಿಂದ ಏನನ್ನು ತೆಗೆದುಕೊಳ್ಳುತ್ತೇವೋ ಅದನ್ನು ಪುನಃ ನಿಸರ್ಗಕ್ಕೇ ಕೊಡಬೇಕು. ಆದರೆ, ಈ ಪ್ರವೃತ್ತಿ ನಮ್ಮಲ್ಲೆಲ್ಲೂ ಕಾಣುತ್ತಿಲ್ಲ, ನಿಸರ್ಗವನ್ನು ಶೋಷಿಸುತ್ತಿರುವ ನಾವು ಅದರ ಪೋಷಣೆಯ ಕಡೆಗೆ ಕಿಂಚಿತ್ತೂ ಗಮನ ಕೊಡುತ್ತಿಲ್ಲ, ನಿಸರ್ಗದ ಧಾರಣಶಕ್ತಿಗೂ ಒಂದು ಮಿತಿ ಇದೆ,'' ಎಂದು ಅವರು ಹೇಳಿದರು.

''ನಮ್ಮಲ್ಲಿ ಪರಿಸರ ಸಂರಕ್ಷಣೆಗೆಂದೇ ಹತ್ತಾರು ಬಗೆಯ ಸಂಸ್ಥೆಗಳಿವೆ. ಆದರೆ, ಇವೆಲ್ಲವೂ ಕೇವಲ ವಿದ್ಯಾರ್ಥಿಗಳನ್ನು ಉತ್ಪಾದಿಸುತ್ತಿವೆಯೇ ವಿನಾ ಉಪಯುಕ್ತವಾದ ಸಂಶೋಧನೆಗಳ ಕಡೆಗೆ ಗಮನ ಕೊಡುತ್ತಿಲ್ಲ, ಇದರ ಜತೆಗೆ, ಸಂಶೋಧನೆಗಳನ್ನು ಸರಕಾರವು ಆದ್ಯತೆಯ ಮೇಲೆ ಜಾರಿಗೆ ತರುವ ಕೆಲಸವನ್ನೂ ಮಾಡಬೇಕು,'' ಎಂದು ಅವರು ಸಲಹೆ ನೀಡಿದರು.



ನಗರದ ವೃಕ್ಷವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಗುರುವಾರ ಎರಡು ದಿನಗಳ ರಾಷ್ಟ್ರೀಯ ಸಮಾವೇಶ ಆರಂಭವಾಯಿತು. ಈ ಸಂದರ್ಭದಲ್ಲಿ ಸುರೇಂದ್ರಕುಮಾರ್, ಎಚ್ ವೈ ಮೋಹನ್‌ರಾಮ್, ಆರ್ ಎಸ್ ಪ್ರಶಾಂತ್, ಉಮಾಶಂಕರ್ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ ಎಸ್ ಸುಬ್ಬರಾವ್ ''ದೇಶದಲ್ಲಿ ಪ್ರತೀ ಹೆಕ್ಟೇರ್‌ಗೆ ಕೇವಲ 73 ಮರಗಳಷ್ಟೆ ಇವೆ. ಆದರೆ ಇದು ಮುನ್ನೂರಾದರೂ ಆಗಬೇಕು. ಜಾಗತಿಕ ಸರಾಸರಿ ಮಟ್ಟಕ್ಕೆ ಹೋಲಿಸಿದರೆ ಭಾರತದಲ್ಲಿರುವ ಅರಣ್ಯದ ಪ್ರಮಾಣ ಕಡಿಮೆ ಎನ್ನುವುದು ವಾಸ್ತವ,'' ಎಂದರು.

''ದೇಶದಲ್ಲಿ 15 ಲಕ್ಷ ಹೆಕ್ಟೇರ್ ಅರಣ್ಯವಿದ್ದರೂ ಇಲ್ಲಿಯ ಕೈಗಾರಿಕಾ ಅಗತ್ಯಗಳಿಗೆ ನಾವು ಆಮದನ್ನೇ ನೆಚ್ಚಿಕೊಂಡಿದ್ದೇವೆ. ಈಗ ಇರುವ ಶೇ 12ರಷ್ಟು ಆಮದು 2020ರ ವೇಳೆಗೆ ದುಪ್ಪಟ್ಟಾಗುವ ಸಂಭವವಿದೆ. ಈ ವಿಷಯದಲ್ಲಿ ಸ್ವಾವಲಂಬನೆಯನ್ನು ಗುರಿಯಾಗಿ ಇಟ್ಟುಕೊಂಡು ಸಂಶೋಧನೆಗಳು ನಡೆಯಬೇಕು. ಉದ್ಯಮಗಳ ಜತೆಗೆ ಸ್ಥಳೀಯ ಅಗತ್ಯಗಳನ್ನೂ ನಾವು ಮರೆಯುವಂತಿಲ್ಲ'' ಎಂದು ಅವರು ಸೂಚಿಸಿದರು.

ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ಸುರೇಂದ್ರಕುಮಾರ್ ಮಾತನಾಡಿ ''ಮರಗಳ ಸಾಗುವಳಿ ಈಗ ಲಾಭದಾಯಕವಾದ ಕಸುಬಾಗಿದೆ. ಆದರೆ, ನಾವು ಸಮಾಜದ ನಿರೀಕ್ಷೆಗೆ ತಕ್ಕಂತೆ ಸ್ಪಂದಿಸುತ್ತಿಲ್ಲ, ಕೇವಲ ಮರಗಳನ್ನು ನೆಟ್ಟರಷ್ಟೆ ಸಾಲದು. ಅವುಗಳ ಆರೋಗ್ಯದ ಬಗ್ಗೆಯೂ ಗಮನ ಕೊಡಬೇಕು,'' ಎಂದರು.

ಕಾರ್ಯಕ್ರಮದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳಾದ ಆರ್ ಎಸ್ ಪ್ರಶಾಂತ್, ಡಾ.ಆರ್ ಉಮಾಶಂಕರ್, ಡಾ.ಕೆ ಎಸ್ ಶಶಿಧರ್, ಆರ್ ಎಸ್ ಸುರೇಶ್, ಡಾ.ಗೀತಾ ಜೋಶಿ ಉಪಸ್ಥಿತರಿದ್ದರು.